

ಸ್ಕಾಟ್ಲೆಂಡ್

# ಫೋರ್ಟ್ ಅಗಸ್ಟಸ್ ಎಂಬ ಹಳ್ಳಿಯಲ್ಲಿ..

■ ಮಂಜುನಾಥ ಡಿ.ಎಸ್.



ನಮ್ಮ ಸ್ಕಾಟ್ಲೆಂಡ್ ಪ್ರವಾಸದಲ್ಲಿ ಒಂದು ದಿನ ಹೈಲಾಂಡ್ಸ್ ಭೇಟಿಗಾಗಿ ಮೀಸಲಾಗಿತ್ತು. ಎಡಿನ್‌ಬರೊ ನಗರದಿಂದ ಬೆಳಗಿನ ಎಂಟಕ್ಕೆ ಹೊರಟು ಸಂಜೆ ಎಂಟಕ್ಕೆ ಮರಳುವ ಹನ್ನೆರಡು ಗಂಟೆಗಳ ಈ ಟೂರ್‌ನಲ್ಲಿ – ಗ್ಲೆನ್ಕೊ, ಬೆನ್ ನೆವಿಸ್, ಗ್ರೇಟ್ ಗ್ಲೆನ್, ಇತ್ಯಾದಿಗಳನ್ನು ಕೇವಲ ದೂರದಿಂದಲಷ್ಟೇ ನೋಡಿ ತೃಪ್ತಿ ಪಟ್ಟುಕೊಂಡು 'ಇಷ್ಟೇನೆ?' ಎಂದು ನಿಟ್ಟುಸಿರುಬಿಡುವ ಸಂದರ್ಭದಲ್ಲಿ ನಮ್ಮ ಬಸ್ ಫೋರ್ಟ್ ಅಗಸ್ಟಸ್ ತಲುಪಿತ್ತು. ಭೋಜನಕ್ಕೂ ಸೇರಿದಂತೆ ನಮ್ಮ ಬಳಿ ಇದ್ದುದು ಒಟ್ಟು ಎರಡು ತಾಸುಗಳ ಸಮಯ. ಅಷ್ಟು ಸಮಯದಲ್ಲಿ ಎಷ್ಟು ಸಾಧ್ಯವೋ ಅಷ್ಟೂ ಫೋರ್ಟ್ ಅಗಸ್ಟಸ್ ಬಗ್ಗೆ ತಿಳಿಯುವ, ಕಣ್ತುಂಬಿಕೊಳ್ಳುವ ತವಕ ನಮ್ಮದು.

'ಗ್ರೇಟ್ ಗ್ಲೆನ್ ವೇ'ಯ ಲಾಕ್ಸ್ ನೆಸ್‌ನ ದಕ್ಷಿಣದ ತುತ್ತ ತುದಿಯಲ್ಲಿರುವ ಕಿರು ಗ್ರಾಮದ ಹೆಸರು ಫೋರ್ಟ್ ಅಗಸ್ಟಸ್. ಈ ರಮಣೀಯ ಗ್ರಾಮ ತನ್ನ ಚಾರಿತ್ರಿಕ ಹಿನ್ನೆಲೆ ಮತ್ತು ಪ್ರಾಕೃತಿಕ ಸೌಂದರ್ಯದಿಂದಾಗಿ ಹೆಸರಾಂತ ಪ್ರವಾಸೀ ತಾಣವಾಗಿದೆ. ಇನ್ವರ್ನೆಸ್‌ನಿಂದ ಫೋರ್ಟ್ ವಿಲಿಯಂಗೆ ಸಂಪರ್ಕ ಕಲ್ಪಿಸುವ, 60 ಮೈಲಿ ಉದ್ದದ ಕೆಲೆಡೋನಿಯಲ್ ಕಾಲುವೆಯ ನಡುವಿನಲ್ಲಿದೆ. ಹೆಸರಾಂತ ಸಿವಿಲ್ ಎಂಜಿನಿಯರ್ ಥಾಮಸ್ ಟೆಲ್ಫೋರ್ಡ್ ವಿನ್ಯಾಸಗೊಳಿಸಿದ ಈ ಕಾಲುವೆ 1822ರಲ್ಲಿ ಸಂಚಾರಕ್ಕೆ ಮುಕ್ತವಾಯಿತು. ಈ ಕಾಲುವೆ ಹಳ್ಳಿಯನ್ನು ವಿಭಜಿಸುತ್ತದೆ. ಹಡಗುಗಳ ಸುಗಮ ಸಂಚಾರಕ್ಕಾಗಿ ನಿರ್ಮಿಸಲಾಗಿರುವ 29 ಲಾಕ್ ಗೇಟ್‌ಗಳು (ಇವು ಕಾಲುವೆಯಲ್ಲಿನ ನೀರಿನ ಮಟ್ಟ ನಿಯಂತ್ರಿಸುತ್ತವೆ) ಮತ್ತು 10 ತಿರುಗು ಸೇತುವೆಗಳು ಕೆಲೆಡೋನಿಯಲ್ ಕಾಲುವೆಯ ಅಂಗವಾಗಿವೆ.

## ಸ್ವಾರಸ್ಯಕರ ನಾಮಪುರಾಣ

ಆರನೇ ಶತಮಾನದಲ್ಲಿ, ಸಂತ ಹುಯಿಮೆ ಎಂಬ ಧರ್ಮಗುರುಗಳು ಇಲ್ಲಿ ಇಗರ್ಜಿ ಸ್ಥಾಪಿಸಿದರು. ಈ ಗುರುಗಳ ಕಾರಣದಿಂದಾಗಿಯೇ, ಜನವಸತಿಯಿರುವ ಹೈಲಾಂಡ್ಸ್‌ನ ಪ್ರದೇಶಗಳಲ್ಲೊಂದಾದ ಈ ಕೇಂದ್ರಸ್ಥಳವನ್ನು ಸಿಲ್ ಹುಯಿಮೆ (Cille Chuimein) ಎಂದು ಕರೆಯಲಾಗಿತ್ತು. ಆದರೆ, ಎರಡನೇ ಜಾರ್ಜ್‌ನ ಕಿರಿಯ ರಾಜಕುಮಾರ ವಿಲಿಯಮ್ ಅಗಷ್ಟಸ್ ಗೌರವಾರ್ಥ ಈ ಗ್ರಾಮದ ಹೆಸರನ್ನು ಈಗ ಪ್ರಚಲಿತವಿರುವ ಫೋರ್ಟ್ ಅಗಸ್ಟಸ್ ಎನ್ನುವ ಹೆಸರಿಗೆ ಬದಲಿಸಲಾಗಿದೆ. ಈ ಬದಲಾವಣೆಗಳ ಮೂಲಕ ಊರಿನ ಹೆಸರಿನ ಮೇಲೆ ಧರ್ಮಕಾರಣವೂ ರಾಜಕಾರಣವೂ ಪ್ರಭಾವ ಬೀರಿರುವುದನ್ನು ಗುರ್ತಿಸಬಹುದು.

1772ರಲ್ಲಿ ನಿರ್ಮಾಣಗೊಂಡ ಮೂರು ಕಮಾನುಗಳ ಕಲ್ಲು ಸೇತುವೆಯಲ್ಲಿ ಎರಡು ಕಮಾನುಗಳು 1849ರ ಮಹಾಪ್ರಳಯದಲ್ಲಿ ಕೊಚ್ಚಿಹೋದುವಂತೆ. ಮರದ ದಿಮ್ಮಿಗಳಿಂದ ತಾತ್ಕಾಲಿಕವಾಗಿ ದುರಸ್ತಿಗೊಂಡಿರುವ ಸೇತುವೆಯನ್ನು